# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| 1)ಹಂಪಣ್ಣ ತಂದೆ ದಿ॥ ಕೊಲ್ಲಾರಪ್ಪ<br>2)ಶ್ರೀ ಎಂ.ತಿಮ್ಮಪ್ಪ ತಂದೆ ಬಸಪ್ಪ | ಶ್ರೀಮತಿ ಹನುಮಂತಮ್ಮ ಗಂಡ ರಾಮಲಿಂಗಪ್ಪ |

**ವಿಷಯ:**ಬಳ್ಳಾರಿ ತಾಲೂಕು ಮೋಕ ಹೋಬಳಿ ಗೋಟೂರು ಗ್ರಾಮದ ಸರ್ವೆ ನಂ:20 ವಿಸ್ತೀರ್ಣ:1.16 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

*****

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಮೋಕ ಹೋಬಳಿ ಗೋಟೂರು ಗ್ರಾಮದ ಸರ್ವೆ ನಂ:20 ವಿಸ್ತೀರ್ಣ:1.16 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಶ್ರೀ ಹಂಪಣ್ಣ ತಂದೆ ದಿ॥ ಕೊಲ್ಲಾರಪ್ಪ ಇವರು ಶ್ರೀ ಎಂ ತಿಮ್ಮಪ್ಪ ತಂದೆ ಎಂ ಬಸಪ್ಪ ಇವರಿಗೆ ಖರೀದಿಗೆ ಮಾರಟ ಮಾಡಿರುತ್ತಾರೆ. ಅದರಂತೆ ಖರೀದಿದಾರರ ಹಕ್ಕಬದಲಾವಣೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ನಿರೀಕ್ಷಾಕರು, ಮೋಕಾ ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಲಾಗಿ ನಿಗದಿತ್ತ ಅವದಿಯಲ್ಲಿ ಶ್ರೀಮತಿ ಹನುಮಂತಮ್ಮ ಗಂಡ ರಾಮಲಿಂಗಪ್ಪ ಇವರಿಂದ ತಕಾರರು ಅರ್ಜಿಬಂದಿರುತ್ತದೆ. ಹಾಗೂ ಈ ಜಮೀನು ಕರ್ನಾಟಕ (ಕೆಲವು ನಿರ್ದಿಷ್ಟ ಜಮೀನುಗಳು ಪರಭಾರೆ ನಿಷೇದ) ಕಾಯ್ದೆ 1978ರ ವ್ಯಾಪ್ತಿಗೆ ಒಳಪಡುತ್ತದೆ ಪ್ರಯುಕ್ತ ಕಂದಾಯ ನಿರೀಕ್ಷಕರು, ಮೋಕಾ ಇವರು ಸದ್ರಿ ಹಕ್ಕುಬದಲಾವಣೆ ಕಡತವನ್ನು ತಿರಸ್ಕರಿಸಿ ವಿಚಾರಣೆನಡೆಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:23-12-2015, 11-01-2016 ಮತ್ತು 04-04-2016 ವಿಚಾರಣೆ ಕರೆಯಲಾಗಿ ಅರ್ಜಿದಾರರು ಪ್ರಕರಣಕ್ಕೆ ಹಾಜರಾಗಿರುತ್ತಾರೆ. ಪ್ರತಿವಾದಿಯಾದ ಶ್ರೀಮತಿ ಹನುಮಂತಮ್ಮ ಗಂಡ ರಾಮಲಿಂಗಪ್ಪ ಸಂಗನಕಲ್ಲು ಗೈರು ಹಾಜರಾಗಿರುತ್ತಾರೆ ಈ ವಿಷಯದ ಬಗ್ಗೆ ವಿಚಾರಣೆ ನಡೆಸಲಾಗಿ ಪಟ್ಟದಾರರಾದ ಶ್ರೀ ಹಂಪಣ್ಣ ಇವರು ಹಾಜರಾಗಿ ಸದ್ರಿ ತಕರಾರುದಾರರು ನನ್ನ ಮಗನಾದ ದಿ॥ ರಾಮಲಿಂಗಪ್ಪ ಹೆಂಡತಿಯಾಗಿದ್ದು ಮದುವೆಯಾಗಿ ಮದುವೆಯಾಗಿ ಮೂರುದಿನಕ್ಕೆ ಮಗನನ್ನು ಬಿಟ್ಟು ಹೋಗಿರುತ್ತದೆ ಮತ್ತು ಸಂಗನಕಲ್ಲು ಗ್ರಾಮದ ನಿವಾಸಿಯಾಂದಿಗೆ ಮದುವೆಯಾಗಿರುತ್ತಾರೆ ಅವರು ಮನೆ ಬಿಟ್ಟು ಹೋದಾಗಿನಿಂದ ಅವರಿಗೆ ನಮಗೆ ಯಾವುದೇ ಸಂಬಂಧ ಇರುವುದಿಲ್ಲ. ಸದ್ರಿ ಜಮೀನು ನನ್ನ ಸ್ವಾಧೀನನುಭವದಲ್ಲಿರುತ್ತದೆ ನನ್ನ ಕಷ್ಟಗಳಿಗಾಗಿ ಸದ್ರಿ ಜಮೀನನ್ನು ಮಾರಟಮಾಡಿರುತ್ತೇನೆ ಹಾಗೂ ಸದ್ರಿ ಜಮೀನಿನಲ್ಲಿ ಕ್ರಯಕ್ಕೆ ಪಡೆದ ಶ್ರೀ ಎಂ ತಿಮ್ಮಪ್ಪ ತಂದೆ ಎಂ ಬಸಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ವಿನಂತಿಸಿಕೊಂಡಿರುತ್ತಾರೆ.

ಹಾಗೂ ಸದ್ರಿ ಜಮೀನಿನ ಡಯಾಗ್ಲಾಟ್ ಪರಿಶೀಲಿಸಲಾಗಿ ಜಿ.ಡಿ ಎಂದು ಇದ್ದು ಪಟ್ಟಾ ಜಮೀನಾಗಿರುತ್ತದೆ. ಹಾಗೂ ಎಲ್ .ಎನ್.ಡಿ ಮತ್ತು ಎಲ್.ಆರ್.ಎಂ ಶಾಖೆಯ ವಿಷಯನಿರ್ವಹಕರು ದಾಖಲೆಗಳನ್ನು ಪರಿಶೀಲಿ ಸದ್ರಿ ಜಮೀನು ಮಂಜೂರಾತಿಯ ಬಗ್ಗೆ ಮಾಹಿತಿ ಪಡೆಯಲಾಗಿ ಸದ್ರಿ ಮಂಜೂರಾತಿ ಜಮೀನಾಗಿರುವುದಿಲ್ಲವೆಂದು ವರದಿ ನೀಡಿದ ಆದಾರದ ಮೇರೆಗೆ ಈ ಕೆಳಗಿನಂತೆ ಆದೇಶ.

**-::ಆದೇಶ::-**

ದಿನಾಂಕ:25/4/2016

ಸಂ/ಕಂ/ವಿವಾದ/81/2015-16

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಮೋಕ ಹೋಬಳಿ ಗೋಟೂರು ಗ್ರಾಮದ ಸರ್ವೆ ನಂ:20 ವಿಸ್ತೀರ್ಣ:1.16 ಎಕರೆ ಜಮೀನು ಖರೀದಿದಾರರಾದ ಶ್ರೀ ಎಂ.ತಿಮ್ಮಪ್ಪ ತಂದೆ ಬಸಪ್ಪ ಇವರ ಹೆಸರಿಗೆ ಕ್ರಯ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ:25.4.2016ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು

ತಹಶೀಲ್ದಾರರು, ಬಳ್ಳಾರಿ.
Tasildar, Bellary.

ಪ್ರತಿಯನ್ನು:

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ.

ಮೇಲ್ಸಹಿ.

28/05